4002

**First Semester (3 Year) LL.B. Examination, March/April 2021**
**CONTRACT – I**

Duration : 3 Hours

Max. Marks : 80

**Instructions : 1. Answer any five questions from group (a) each question carries 10 marks.**

**2. Answer any five questions from group (b) each question carries 6 marks.**

**3. Answers should be written either in English or Kannada completely.**

Q. No. 1. (a) Define 'proposal'. Explain the circumstances under which it lapses. Marks : 10

'ಪ್ರಸ್ತಾವನೆ'ಯನ್ನು ವ್ಯಾಖ್ಯಾನಿಸಿ. ಅದು ರದ್ದಾಗುವಿಕೆಯ ಸಂದರ್ಭಗಳನ್ನು ವಿವರಿಸಿರಿ.

Q. No. 1. (b) 'A' proposed to sell a radio to 'B' by letter received by 'B' on 1st March 2021. 'B' posted his acceptance letter on 2nd March 2021 which reached 'A' on 3rd March 2021. Meanwhile 'B' revoked his acceptance by a letter posted on 3rd March 2021 which reached 'A' on 4th March 2021. Is 'B' bound to buy the radio ? Marks : 6

'ಅ'ನು ತನ್ನ ರೇಡಿಯೋವನ್ನು ಮಾರುವ ಪ್ರಸ್ತಾವನೆಯನ್ನು 'ಬ' ಗೆ ಪತ್ರದ ಮೂಲಕ ಕಳುಹಿಸಿದನು. ಅದು 'ಬ'ನಿಗೆ 2021ನೇ ಇಸವಿ ಮಾರ್ಚ್ ಒಂದನೇ ತಾರೀಖಿನಂದು ತಲುಪಿತು. 'ಬ'ನು ತನ್ನ ಅಂಗೀಕಾರ ಪತ್ರವನ್ನು 2021ನೇ ಇಸವಿ ಮಾರ್ಚ್ ಎರಡನೇ ತಾರೀಖಿನಂದು ಅಂಚೆಯ ಮೂಲಕ ಕಳುಹಿಸಿದನು. ಅದು 'ಅ' ಗೆ 2021ನೇ ಇಸವಿ ಮಾರ್ಚ್ ಮೂರನೇ ತಾರೀಖಿನಂದು ತಲುಪಿತು. ಈ ನಡುವೆ 'ಬ'ನು ತನ್ನ ಅಂಗೀಕಾರವನ್ನು ಹಿಂತೆಗೆದುಕೊಳ್ಳುವ ಪತ್ರವನ್ನು 2021ನೇ ಇಸವಿ ಮಾರ್ಚ್ ಮೂರನೇ ತಾರೀಖಿನಂದು ಕಳುಹಿಸಿದನು, ಅದು 'ಅ'ಗೆ 2021ನೇ ಇಸವಿ ಮಾರ್ಚ್ ನಾಲ್ಕನೇ ತಾರೀಖಿನಂದು ತಲುಪಿತು. 'ಬ'ನು ರೇಡಿಯೋವನ್ನು ಖರೀದಿಸಲು ಬದ್ಧನಾಗಿರುವನೇ ?

Q. No. 2. (a) State the exceptions to the rule that 'An agreement without consideration is void'. Marks : 10

'ಪ್ರತಿಫಲವಿಲ್ಲದ ಒಪ್ಪಂದವು ಶೂನ್ಯ' ಎಂಬ ನಿಯಮಕ್ಕಿರುವ ಅಪವಾದಗಳನ್ನು ಹೇಳಿರಿ.

Q. No. 2. (b) Ganesh agreed to sell his T.V. worth rupees twenty thousand to Mahesh for two thousand rupees. Later, Ganesh refuses to sell T.V. to Mahesh on the ground that price is too small. Can he do so ? Marks : 6

ಗಣೇಶನು ಇಪ್ಪತ್ತು ಸಾವಿರ ರೂಪಾಯಿ ಬೆಲೆಯುಳ್ಳ ಒಂದು ಟಿ.ವಿ.ಯನ್ನು ಮಹೇಶನಿಗೆ ಎರಡು ಸಾವಿರ ರೂಪಾಯಿಗೆ ಮಾರಾಟಮಾಡಲು ಒಪ್ಪಿಕೊಳ್ಳುತ್ತಾನೆ. ನಂತರ ಬೆಲೆಯು ಬಹಳ ಕಡಿಮೆಯಾಯಿತೆಂದು ಹೇಳಿ ಗಣೇಶನು ಆ ಟಿ.ವಿ.ಯನ್ನು ಮಹೇಶನಿಗೆ ಮಾರಾಟಮಾಡಲು ನಿರಾಕರಿಸುತ್ತಾನೆ. ಅವನು ಹಾಗೆ ಮಾಡಬಹುದೇ ?

Q. No. 3. (a) What is contingent contract ? Explain the rules relating to the performance of contingent contract. Marks : 10

ಸಂಭವನೀಯ ಕರಾರು ಎಂದರೇನು ? ಸಂಭವನೀಯ ಕರಾರಿನ ನೆರವೇರಿಕೆಗೆ ಸಂಬಂಧಿಸಿದ ನಿಯಮಗಳನ್ನು ವಿವರಿಸಿರಿ.

Q. No. 3. (b) Reshma agreed to work as house servant and to have immoral relation with Rajesh, for which Rajesh agreed to pay Rs. 10,000/- per month. Reshma kept up her promises, but Rajesh refused to pay. Reshma institutes a suit against Rajesh to recover the promised amount. Decide. Marks : 6

ರೇಶ್ಮಾಳು ಮನೆಕೆಲಸದವಳಾಗಿ ಕೆಲಸ ಮಾಡಲು ಮತ್ತು ಅನೈತಿಕ ಸಂಬಂಧದಿಂದ ಇರಲು ರಾಜೇಶನೊಡನೆ ಒಪ್ಪಂದ ಮಾಡಿಕೊಳ್ಳುತ್ತಾಳೆ. ಅದಕ್ಕೆ ಪ್ರತಿಯಾಗಿ ರಾಜೇಶನು ತಿಂಗಳಿಗೆ 10,000 ರೂಪಾಯಿ ಕೊಡಲು ಒಪ್ಪಿಕೊಳ್ಳುತ್ತಾನೆ. ರೇಶ್ಮಾಳು ತನ್ನ ವಚನಗಳನ್ನು ಈಡೇರಿಸಿದಳು, ಆದರೆ ರಾಜೇಶನು ಹಣಕೊಡಲು ನಿರಾಕರಿಸಿದನು. ಆತ ಕೊಟ್ಟ ವಚನದ ಹಣವನ್ನು ಪಡೆಯಲು ರೇಶ್ಮಾಳು ರಾಜೇಶನ ವಿರುದ್ಧ ದಾವೆಯನ್ನು ಹೂಡುತ್ತಾಳೆ. ನಿರ್ಣಯಿಸಿರಿ.

Q. No. 4. (a) Define 'Consent'. When does it become free ? Marks : 10

'ಸಮ್ಮತಿಯ'ನ್ನು ವ್ಯಾಖ್ಯಾನಿಸಿರಿ. ಅದು ಯಾವಾಗ ಮುಕ್ತ ಸಮ್ಮತಿಯಾಗುತ್ತದೆ ?

Q. No. 4. (b) Mohan aged 16 years, agreed to sell his scooter to Gopal for Rs. 5,000/-, but later refused to perform his promise. Gopal institutes a suit against Mohan. Will he succeed ? Marks : 6

ಮೋಹನ ಎಂಬ ಹದಿನಾರು ವಯಸ್ಸಿನ ಹುಡುಗನು ಗೋಪಾಲನಿಗೆ ತನ್ನ ಸ್ಕೂಟರ್‌ನ್ನು 5,000 ರೂಪಾಯಿಗೆ ಮಾರಲು ಒಪ್ಪಿಕೊಳ್ಳುತ್ತಾನೆ, ಆದರೆ ನಂತರ ತನ್ನ ವಚನವನ್ನು ಈಡೇರಿಸಲು ನಿರಾಕರಿಸುತ್ತಾನೆ. ಗೋಪಾಲನು ಮೋಹನನ ವಿರುದ್ಧ ದಾವೆಯನ್ನು ಹೂಡುತ್ತಾನೆ. ಅವನು ಜಯಗಳಿಸುವನೇ ?

Q. No. 5. (a) Explain the doctrine of frustration with decided cases. Marks : 10

ನಿಷ್ಫಲ ತತ್ವ (ಆಶಾಭಂಗ ಸಿದ್ಧಾಂತ)ವನ್ನು ನಿರ್ಣಯಿಸಿದ ಪ್ರಕರಣಗಳೊಂದಿಗೆ ವಿವರಿಸಿರಿ.

Q. No. 5. (b) Ramesh promised to marry Radhika after the death of his father. However, during the life time of his father, Ramesh married Revati, another woman. Radhika institutes a suit against Ramesh for breach of contract. Decide. Marks : 6

ರಮೇಶನು ತನ್ನ ತಂದೆ ಮೃತನಾದ ಮೇಲೆ ರಾಧಿಕಾಳನ್ನು ಮದುವೆಯಾಗುವುದಾಗಿ ಅವಳಿಗೆ ವಚನವನ್ನು ಕೊಟ್ಟನು. ಆದಾಗ್ಯೂ, ಅವನ ತಂದೆ ಬದುಕಿರುವಾಗಲೇ ರಮೇಶನು ರೇವತಿ ಎಂಬ ಇನ್ನೊಬ್ಬ ಮಹಿಳೆಯನ್ನು ಮದುವೆಯಾದನು. ರಾಧಿಕಾಳು ರಮೇಶನ ವಿರುದ್ಧ ಕರಾರಿನ ಉಲ್ಲಂಘನೆಗಾಗಿ ದಾವೆಯನ್ನು ಹೂಡಿದಳು. ನಿರ್ಣಯಿಸಿರಿ.

Q. No. 6. (a) Explain the law relating to the time and place of performance of a contract. Marks : 10

ಒಂದು ಕರಾರಿನ ನೆರವೇರಿಕೆಯ ವೇಳೆ ಮತ್ತು ಸ್ಥಳಕ್ಕೆ ಸಂಬಂಧಿಸಿದ ಕಾನೂನನ್ನು ವಿವರಿಸಿರಿ.

Q. No. 6. (b) Write a short note on discharge of contract by agreement. Marks : 6

ಒಪ್ಪಂದದ ಮೂಲಕ ಕರಾರಿನ ವಿಸರ್ಜನೆಯ ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

Q. No. 7. (a) Explain the law relating to liquidated damages under the Indian Contract Act. Marks : 10

ಭಾರತೀಯ ಕರಾರು ಅಧಿನಿಯಮದಡಿಯಲ್ಲಿ ದ್ರವ್ಯ ಪರಿಹಾರಕ್ಕೆ ಸಂಬಂಧಿಸಿದ ಕಾನೂನನ್ನು ವಿವರಿಸಿರಿ.

Q. No. 7. (b) 'A', a trader, leaves his bag containing fruits in the house of 'B' by mistake. 'B' eats those fruits. 'A' claims price of the fruits from 'B'. Decide. Marks : 6

'ಅ' ಎಂಬ ಒಬ್ಬ ವ್ಯಾಪಾರಿಯು ತನ್ನ ಹಣ್ಣಿನ ಚೀಲವನ್ನು ತಪ್ಪುಗ್ರಹಿಕೆಯಿಂದ 'ಬ'ನ ಮನೆಯಲ್ಲಿ ಬಿಟ್ಟನು. 'ಬ'ನು ಆ ಹಣ್ಣುಗಳನ್ನು ತಿಂದನು. 'ಅ'ನು 'ಬ'ನಿಂದ ಹಣ್ಣಿನ ಬೆಲೆ ಕೇಳುತ್ತಾನೆ. ನಿರ್ಣಯಿಸಿರಿ.

Q. No. 8. (a) Explain the remedies available for breach of contract. Marks : 10

ಕರಾರಿನ ಉಲ್ಲಂಘನೆ ಆದಾಗ ದೊರಕುವ ಪರಿಹಾರಗಳನ್ನು ವಿವರಿಸಿರಿ.

Q. No. 8. (b) Ashok, due to mistake of law, pays income tax, which he is not bound to pay. Can he recover the same ? Marks : 6

ಅಶೋಕನು ಆದಾಯ ತೆರಿಗೆಯನ್ನು ತುಂಬುವ ಹೊಣೆಗಾರಿಕೆಯನ್ನು ಹೊಂದಿಲ್ಲವಾಗಿದ್ದರೂ ಕಾನೂನಿನ ತಪ್ಪು ಗ್ರಹಿಕೆಯಿಂದ ಆದಾಯ ತೆರಿಗೆ ತುಂಬುತ್ತಾನೆ. ಅದನ್ನು ಆತ ಮರಳಿ ಪಡೆಯಬಹುದೇ ?

Q. No. 9. (a) What is Injunction ? Under what circumstances, court can grant perpetual injunction ? Marks : 10

ನಿರ್ಬಂಧಕಾಜ್ಞೆ ಎಂದರೇನು ? ಯಾವ ಸಂದರ್ಭಗಳಲ್ಲಿ ನ್ಯಾಯಾಲಯವು ಶಾಶ್ವತ ನಿರ್ಬಂಧಕಾಜ್ಞೆಯನ್ನು ನೀಡಬಹುದು ?

Q. No. 9. (b) Avinash is the owner of a building. Satish expels Avinash from that building by force. Advice Avinash. Marks : 6

ಅವಿನಾಶನು ಒಂದು ಕಟ್ಟಡದ ಮಾಲೀಕನಾಗಿದ್ದಾನೆ. ಸತೀಶನು ಆ ಕಟ್ಟಡದಿಂದ ಅವಿನಾಶನನ್ನು ಬಲಪ್ರಯೋಗದಿಂದ ಹೊರಹಾಕುತ್ತಾನೆ. ಅವಿನಾಶನಿಗೆ ಸಲಹೆಯನ್ನು ನೀಡಿರಿ.

Q. No.10. (a) By whom and against whom a specific performance of contract can be claimed ? Marks : 10

ಕರಾರಿನ ನಿರ್ದಿಷ್ಟ ನೆರವೇರಿಕೆಯನ್ನು ಯಾರು ಮತ್ತು ಯಾರ ವಿರುದ್ಧ ಕೇಳಬಹುದು ?

Q. No.10. (b) Write a short note on Rectification of Instruments. Marks : 6

ಲಿಖಿತಪತ್ರಗಳ ತಿದ್ದುಪಡಿಯ ಕುರಿತು ಒಂದು ಲಘು ಟಿಪ್ಪಣಿ ಬರೆಯಿರಿ.

---